ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 6, May-June, 2023, Pp. 89-99.**
**©*IIMRD*, Mysuru**

IIMRD JOURNALS

**www.iimrd.com**

# ಬರಗೂರು ರಾಮಚಂದ್ರಪ್ಪನವರ ಕಾವ್ಯದಲ್ಲಿ ದೇವರು: ಒಂದು ಜಿಜ್ಞಾಸೆ

***ಪ್ರಮೋದ್.ಕೆ. ಬಿ.**

*ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***ಸಾರಾಂಶ:(Abstract)***

*ಯಜಮಾನ ಸಂಸ್ಕೃತಿಯ ಬೇರುಗಳನ್ನು ವಾಸ್ತವದ ನೆಲೆಯಲ್ಲಿ ಅಂತೆಯೇ ತಾತ್ವಿಕ ನೆಲೆಯಲ್ಲಿ ವಿಶ್ಲೇಷಣೆಗೆ ಒಳಗು ಮಾಡುತ್ತಾ ಶ್ರಮ ಪ್ರಧಾನ ಸಂಸ್ಕೃತಿಯ ಅಂತಃಸತ್ವವನ್ನು ಕಂಡುಕೊಂಡು ಶ್ರಮ ಸಂಸ್ಕೃತಿಯ ಜಗತ್ತಿಗೆ ಆದ ಅನ್ಯಾಯಗಳನ್ನು ಅತ್ಯಂತ ಹೃದಯಸ್ಪರ್ಶಿ ನೆಲೆಯಲ್ಲಿ ಅನಾವರಣ ಮಾಡುತ್ತ ನೊಂದವರ ಬದುಕಿನ ದನಿಯಾಗಿ, ಹೊಸ ಕಾವ್ಯ ಜಗತ್ತನ್ನು ಸೃಷ್ಟಿಸಿದ ಸಾಹಿತಿಗಳಲ್ಲಿ ಅಸಾಧಾರಣ ಪ್ರತಿಭೆ ಬರಗೂರು ರಾಮಚಂದ್ರಪ್ಪ. ಯಾವುದೇ ಮೂಲಾಜಿಗೂ ಯಾರದೇ ಹಂಗಿಗೂ ಒಳಗಾಗದ, ಸತ್ಯಾನ್ವೇಷಣೆಗೆ ಅನ್ಯಾಯ ಮಾಡದೆ ಬದುಕು ಮತ್ತು ಬರಹ ಎರಡರಲ್ಲಿಯೂ ಏಕರೂಪತೆಯನ್ನು ಸಾಧಿಸಿರುವುದೇ ಇವರ ಮೇರು ವ್ಯಕ್ತಿತ್ವಕ್ಕೆ ಸಾಕ್ಷಿ.*

***ಮುಖ್ಯಪದಗಳು (Keywords)*** *ಕನ್ನಡ ಸಾಹಿತ್ಯ, ಬರಗೂರು ರಾಮಚಂದ್ರಪ್ಪ, ದೇವರು.*

## ಪೀಠಿಕೆ

ಮೂಲತಃ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಬರಗೂರಿನವರಾದ ಇವರು, ತಾವು ಬೆಳೆದ ಪರಿಸರದಲ್ಲಿ ಕಂಡುಂಡ ನೋವು, ಬಡತನ, ಕಷ್ಟನಷ್ಟಗಳನ್ನೇ ತಮ್ಮ ಕಾವ್ಯದ ತಾಯಿಬೇರಾಗಿಸಿಕೊಂಡಿದ್ದಾರೆ. 'ಬಂಡಾಯ ಸಾಹಿತ್ಯ ಸಂಘಟನೆ'ಯ ಮೂಲಿಗ ಸಂಚಾಲಕರಲ್ಲೊಬ್ಬರಾದ ಬರಗೂರರು ಎರಡು ಅವಧಿಗೆ ಸಂಚಾಲಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಅನಂತರವೂ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಈ ಹಿಂದಿನ ಸಾಹಿತ್ಯಿಕ ನೆಲೆಗಳಿಗಿಂತ ಭಿನ್ನ ನೆಲೆ; ಆಲೋಚನೆಗಳಿಂದ ಶ್ರೀಮಂತಗೊಳಿಸಿದ್ದಾರೆ. ಅಕ್ಷರ ವಂಚಿತ ಸಮುದಾಯಕ್ಕೆ ಅಕ್ಷರದ ರುಚಿ ಹತ್ತಿದರೆ ಸಾಧನೆಯ ಮೈಲುಗಲ್ಲನ್ನೇ ನಿರ್ಮಿಸಬಹುದೆಂಬುದಕ್ಕೆ ಇವರು ಸಾಕ್ಷಿಯಾಗಿ ನಿಂತಿದ್ದಾರೆ. ಇವರ ಸಾಹಿತ್ಯಿಕ ಕೃಷಿ ಕಾವ್ಯ, ಕಥೆ, ಕಾದಂಬರಿ, ವಿಮರ್ಶೆ, ಸಿನಿಮಾ ಹೀಗೆ ಹಲವು ಮಾಧ್ಯಮಗಳಲ್ಲಿ ಅಭಿವ್ಯಕ್ತಗೊಂಡಿದೆ.

ಬರಗೂರು ರಾಮಚಂದ್ರಪ್ಪನವರು ಐದು ಕವನ ಸಂಕಲನಗಳನ್ನು ಜೊತೆಗೆ 'ಬೆವರು ನನ್ನ ದೇವರು' ಸಾಹಿತ್ಯಿಕ ಸರಣಿಯಲ್ಲಿ ಅವರ ಸಮಗ್ರ ಕವಿತೆಗಳು ಪ್ರಕಟವಾಗಿವೆ. ಸಾಹಿತ್ಯ ಕೃತಿಯಾಧಾರಿತ ಹಲವು ಚಲನಚಿತ್ರಗಳನ್ನು ನಿರ್ಮಿಸಿ, ನಿರ್ದೇಶಿಸಿ, ಸಂಭಾಷಣೆ, ಸಾಹಿತ್ಯ ರಚನೆಯ ಮೂಲಕ ಸಿನಿಮಾ ಕ್ಷೇತ್ರದಲ್ಲಿ

*Please cite this article as:* ಪ್ರಮೋದ್.ಕೆ. ಬಿ. (2023). ಬರಗೂರು ರಾಮಚಂದ್ರಪ್ಪನವರ ಕಾವ್ಯದಲ್ಲಿ ದೇವರು: ಒಂದು ಜಿಜ್ಞಾಸೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(6). ಪು.ಸಂ. 89–99.*

ತಮ್ಮ ಛಾಪು ಮೂಡಿಸಿದ್ದಾರೆ. ಒಟ್ಟು 32 ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ನೀಡಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಬರಗೂರರ ಆಲೋಚನಾ ಲಹರಿ ವೈವಿಧ್ಯವು ವೈಶಿಷ್ಟ್ಯವೂ ಆಗಿದೆ. ಇವರ ಸಾಹಿತ್ಯದ ಮತ್ತೊಂದು ವೈಶಿಷ್ಟ್ಯವೆಂದರೆ 'ಕರುಳು ಮತ್ತು ಕಣ್ಣಿರುವ ಹೃದಯವಂತರ ಮನದಲ್ಲಿ ಸ್ಥಾಯಿತ್ವ ಪಡೆದಿರುವುದು'. ಸಾಹಿತಿಯಾದವನಿಗೆ ಎಲ್ಲ ಸ್ಥರದ ಅನುಭವಗಳು ಬೇಕೆಂಬುದು ಅವರ ನಿಲುವು. ಜೊತೆಗೆ ಇವರ ಸಾಹಿತ್ಯ ಆರೋಗ್ಯಪೂರ್ಣ ಸಮಾಜದ ಆಶಯವನ್ನು ಹೊತ್ತು ನಿಂತಿದೆ. ಬಂಡಾಯದ ಗಟ್ಟಿ ದನಿಯಾದ ಇವರು "ನಮ್ಮ ಮುಂದಿರುವ ಮುಖ್ಯ ಜವಾಬ್ದಾರಿ

ಜನಪರ–ಹೋರಾಟಗಳೊಂದಿಗೆ ಸಂಪರ್ಕ ಮತ್ತು ಬಂಡಾಯ ಸಾಹಿತ್ಯ ಸೃಷ್ಟಿ. ನಾವು ಸೃಷ್ಟಿಸಿರುವ ಸಾಹಿತ್ಯವೇ ನಮ್ಮ ಹೋರಾಟದ ಪ್ರಮುಖ ದಾಖಲೆ. ಈ ಮಾತು ಸದಾ ನಮ್ಮ ಮನಸ್ಸಿನಲ್ಲಿರಬೇಕು. ಈ ದಿಕ್ಕಿನಲ್ಲಿ ಹೆಚ್ಚೆಚ್ಚು ಕ್ರಿಯಾಶೀಲವಾಗಿರಬೇಕು."[1] ಎಂಬ ನಿಲುವಿನ ತಾತ್ವಿಕ ನೆಲೆಗಟ್ಟನ್ನೇ ಬಂಡಾಯದ ಧೋರಣೆಯಾಗಿಸಿಕೊಂಡು ದುಡಿದವರು. ಇಂತಹ ಬರಗೂರರ ಕಾವ್ಯ ಲೋಕಮುಖಿಯಾದ ಆದರ್ಶ ಮತ್ತು ಸಮಾನತಾ ವ್ಯವಸ್ಥೆಗಾಗಿ ಮಿಡಿಯುತ್ತದೆ. 'ದೇವರ'ನ್ನು ಕುರಿತು ಬರಗೂರರ ಸಮಗ್ರ ಕಾವ್ಯವನ್ನು ಅಧ್ಯಯನಕ್ಕೆ ಒಳಗು ಮಾಡಿ ಆ ಬಗೆಗಿನ ಕವಿಯ ಗ್ರಹಿಕೆಗಳನ್ನು ಪ್ರಸ್ತುತ ಸಂದರ್ಭದೊಂದಿಗೆ ಮುಖಾಮುಖಿಗೊಳಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಮನುಷ್ಯನ ಬದುಕು ನಿರಂತರವಾಗಿ ಶ್ರಮವನ್ನು ಬಯಸುತ್ತಲೇ ಇರುತ್ತದೆ. ಅದು ದಿನನಿತ್ಯದ ಬದುಕು ಸಾಗಿಸುವ ಕೂಲಿಯಿಂದ ಮೊದಲುಗೊಂಡು ಬೇರೆ ಬೇರೆ ಕ್ಷೇತ್ರದಲ್ಲಿ ಅದರದೇ ಆದ ಬಗೆಯಲ್ಲಿ 'ಬೆವರು' ಬಯಸುತ್ತದೆ. ಈ ಬೆವರನ್ನು ಕುರಿತು ಬರಗೂರರು ವಿಶೇಷ ರೀತಿಯಲ್ಲಿ ಪ್ರಾಶಸ್ತ್ಯ ನೀಡುತ್ತಾರೆ. ಅವರ ಆಲೋಚನೆಯಲ್ಲಿ 'ಬೆವರೇ ದೇವರು' ಬೆವರಿಲ್ಲದೆ ಇಲ್ಲಿ ಯಾವುದನ್ನು ನಿರ್ಮಿಸಲು ಸಾಧ್ಯವಿಲ್ಲ ಎಂದೇ ಅವರು ನಂಬಿದ್ದಾರೆ. 'ಬವಣೆ' ಎನ್ನುವ ಅವರ ಕವಿತೆಯಿಂದಲೇ ಅದು ಮೊದಲುಗೊಂಡಂತಿದೆ.


***"ಬಿಗಿಗಣ್ಣ ಬದುಕಿನಲಿ ಅತ್ತ ಇತ್ತ ಹೊರಳಾಡುತ್ತ***
***ಮುದುಡುತ್ತ ಮತ್ತೆ ಮಲಗುವಾಗ ಹೊದಿಕೆ ಹೊದ್ದು***
***ಯಾವುದೋ ಬಾಯಗುಡಿಯಲ್ಲೊಂದು ಗಂಟೆ ಸದ್ದು***
***ಏಳಯ್ಯ ಬೆಳಗಾಯಿತು"[2]***

ದಿನನಿತ್ಯದ ಕಾಯಕ ಇಲ್ಲಿ ದುಡಿಮೆಯೇ ಆಗಿದೆ. ಮುಂಜಾನೆ ಏಳುತ್ತಲೇ ಅಥವಾ ಏಳುವ ಮುಂಚೆಯೇ ಅದು 'ಯಾವುದೋ ಬಾಯಗುಡಿಯಿಂದ' ಪ್ರೇರಿತವಾಗುತ್ತದೆ. 'ಬಾಯಗುಡಿ' ಎನ್ನುವ ರೂಪಕವಂತು ದುಡಿಮೆಗೆ ಹಚ್ಚುವ ಇತ್ಯಾತ್ಮಕ ಮನಸ್ಥಿತಿಯನ್ನು ಇದಕ್ಕೂ ಹೊರತಾಗಿ ಉದಾಸೀನತೆಗೆ ಪೆಟ್ಟು ಕೊಡುವಂತಹ ವ್ಯಂಗ್ಯದ ಧಾಟಿಯಲ್ಲೂ ಅಭಿವ್ಯಕ್ತಗೊಂಡಂತಿದೆ. ಈ ಮನೋಭೂಮಿಕೆ ಸದಾ ಎಚ್ಚರವಾಗಿಡುವ ಅಸ್ತ್ರವಾಗಿಯೂ ಬಳಕೆಯಾಗಬಹುದಾದ ರೀತಿಯದ್ದು. ನಿತ್ಯ ಬದುಕಿನ, ಬದುಕು

[1]. ಬರಗೂರು ರಾಮಚಂದ್ರಪ್ಪ., ಸಂಸ್ಕೃತಿ : ಶ್ರಮ ಮತ್ತು ಸೃಜನಶೀಲತೆ., ಪು.84–85.
[2]. ಬರಗೂರು ರಾಮಚಂದ್ರಪ್ಪ., ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು., ಪು.14.

ಹೊರೆಯುವುದಕ್ಕೆ ನಡೆಸುವ ಮನುಷ್ಯ ಜಂಜಾಟಗಳು ಅವನ ಬೆವರಿನ ಪ್ರತೀಕ. ಬೆವರಿಲ್ಲದ ದೇಶ, ಸಮಾಜ, ಸಂಸ್ಕೃತಿಗಳ ನಿರ್ಮಾಣ ಅಸಾಧ್ಯವಾದದ್ದು. "ಸಮಾಜ ಮತ್ತು ಸಂಸ್ಕೃತಿಗಳ ಇತಿಹಾಸವನ್ನೇ ನಿರ್ಮಿಸಿದ ಜನರ ಬೆವರು, ದೇವರ ದೇವರೆಂದು ದೇಶಕ್ಕೆ ದೇಶವೇ ಭಾವಿಸಬೇಕಾಗಿದೆ. 'ಬೆವರು' ಎಂಬ ರೂಪಕದಲ್ಲಿ ಶ್ರಮ, ಸಮುದಾಯ, ಸಮಾಜ, ಸಂಸ್ಕೃತಿ ಎಲ್ಲವೂ ಇದೆ. ಬೆವರಿಗೆ ಏಕ ದೈವವಿಲ್ಲ. ಏಕ ಧರ್ಮವಿಲ್ಲ, ಏಕ ಸಂಸ್ಕೃತಿಯಿಲ್ಲ, ಬೆವರೆಂಬುದು ಬಹುತ್ವದ ಒಕ್ಕೂಟ ರೂಪಕ. ಇಂತಹ ಬೆವರು ಇಂದು ಸಮತೆಯ ತವರಿಗಾಗಿ ತವಕಿಸುತ್ತಿದೆ. ನಾವು ಬೆವರನ್ನೇ ಉಸಿರಾಗಿಸಿಕೊಂಡು

'ಬುದ್ಧಿ ಬಲಗಳ ಪ್ರಭುತ್ವ ಪ್ರಜ್ಞೆ'ಯನ್ನು ವಿಮರ್ಶಿಸುತ್ತ, ಪ್ರಶ್ನಿಸುತ್ತ ಪ್ರಜಾಪ್ರಜ್ಞೆಗೆ ಬೆಲೆ ತರಬೇಕಾಗಿದೆ........ ಈ ತಾತ್ವಿಕತೆಯೇ ನನ್ನನ್ನು ಮತ್ತು ನನ್ನ ಬರಹಗಳನ್ನು ಬೆವರಿಗೆ ಬದ್ಧವಾಗುವಂತೆ ಮಾಡಿದೆ; ಬೆವರೇ ನನ್ನ ದೇವರಾಗಿದೆ. ಆದರೆ ಇದು ಆರಾಧನೆಯಲ್ಲ; ಸಂವೇದನೆ"[3] ಎನ್ನುವ ಬರಗೂರರ ಮಾತುಗಳೇ ಅವರ 'ಬವಣೆ' ಕವಿತೆಯ ಸಾರವನ್ನು ಸ್ಪಷ್ಟಪಡಿಸುವಂತಿದೆ. ಮನುಷ್ಯ ಬದುಕನ್ನು ರೂಪಿಸುವ ಬೆವರೇ ನಿಜಾರ್ಥದಲ್ಲಿ ದೇವರು. ಮಾನವನ ಏಳ್ಗೆಗೆ ಇದೇ ಸರಿಯಾದ ಮಾರ್ಗ. ಸಮಾಜ–ಸಂಸ್ಕೃತಿಗಳ ಕಟ್ಟುವಿಕೆಗೆ ಕಾರಣೀಭೂತವಾದ 'ಬೆವರು' ಇಡೀ ದೇಶದ ಅಸ್ತಿತ್ವಕ್ಕೂ ಕಾರಣವಾಗಿದೆ. ರೇಖಾಕೃತಿಯಲ್ಲಿ ಇದನ್ನು ಹೀಗೆ ಸಂಕೇತಿಸಬಹುದು.




'ಶ್ರಮ ಪ್ರಧಾನ' ವ್ಯವಸ್ಥೆಯೇ ದೇಶ, ಸಮಾಜ, ಸಂಸ್ಕೃತಿಗಳ ಅಡಿಪಾಯವಾಗಿದೆ. ಹೀಗಾಗಿ ಇದನ್ನು ಹೊರತುಪಡಿಸಿದ ದೇಶವನ್ನು ಊಹಿಸಿಕೊಳ್ಳುವುದೂ ತಳ ಒಡೆದ ಮಡಿಕೆ ನಿರ್ಮಿಸಿದಂತಾಗುತ್ತದೆ. ಆದುದರಿಂದ ಕವಿ 'ಬೆವರೇ ನನ್ನ ದೇವರೆಂದು' ಘೋಷಿಸುತ್ತಾರೆ. ಭಾರತದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಿಜವಾಗಿಯೂ ಪ್ರಜೆ ಪ್ರಭುವಾಗಿ ಉಳಿದ್ದಿದ್ದಾನೆಯೇ ಎಂಬ ಪ್ರಶ್ನೆ ಕವಿಯನ್ನು ಬಹುವಾಗಿ ಕಾಡಿರುವಂತಿದೆ. ವಂದಿ ಮಾಗದರಂತೆ ಹಿಂದೆ–ಮುಂದೆ ಸುಳಿದಾಡಿ ಬಹುಪಾರಕು ಹಾಕುವ ಮಂದಿಗೇನೂ ಇಲ್ಲಿ ಕೊರತೆಯಿಲ್ಲ. ತಾವೇ ಆರಿಸಿದ ಪ್ರತಿನಿಧಿ ದೇವರಂತೆ ಕಾಣುವ ಮನಸ್ಥಿತಿಯನ್ನು ಕಂಡ ಕವಿ ಮರುಕ ವ್ಯಕ್ತಪಡಿಸಿದ್ದಾರೆ.

---

3. ಬರಗೂರು ರಾಮಚಂದ್ರಪ್ಪ., ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು., ಲೇಖಕರ ಮಾತು ಭಾಗದಿಂದ.

*"ಏನು ಗಡಿ ಬಿಡಿ!*
*ದಾರಿ ಬಿಡಿ ದೇವರ ಗುಡಿಯಿಂದ ಬಂದ ಕೌ*
*ರವೇಶ್ವರ; ಸಿರೀಂಜು ಶೈಲಿಯಲ್ಲೆಳೆದ ಜನರ ಉಸಿರ*
*ರಕ್ಕಸ ರೆಕ್ಕೆಯಲ್ಲಿ ರಾಚುತ್ತ ಬಂದಂಥ ಭೂರಿ ಕಿರೀಟದ ಬಾರಿಭೂಪ*
*ಫಣಮಿಣೆಯ ಉಡುಪಿನೊಳಗೆ ಝಣ ಝಣಿಸುವ ದುರ್ಯೋ ಧನಕುರು*
*ಕುಲಚಕ್ರವರ್ತಿ ಬಹುಪರಾಕು ಬಹುಪರಾಕು!"*[4]

'ಜೈ Money ಭಾರತ' ಎನ್ನುವ ಈ ಕವಿತೆ ಹಣದ ವ್ಯಾಮೋಹದಿಂದ ದೇಶ ಸಾಗುತ್ತಿರುವ ದುಮಾರ್ಗದ ರೀತಿಯನ್ನು ಬಿಂಬಿಸುವಂತಿದೆ. ದೇವರ ಗುಡಿಯಿಂದ ಬಂದಿರುವವನಂತೆ ಅಥವಾ ಹಣವುಳ್ಳವ ಇಲ್ಲಿ ದೇವರೇ ಆಗಿರುವಂತೆ ಬಿಂಬಿತವಾಗುತ್ತಿದ್ದಾನೆ. ಎನ್ನುವ ಬೇಸರ ಕವಿಯ ಅಸಮಾಧಾನಕ್ಕೆ ಕಾರಣವಾಗಿದೆ. ಹಣವೇ ದೇವರಾಗುವ ಪ್ರಕ್ರಿಯೆಯಲ್ಲಿ ಮಂದಿ ಬಾಗಿಯಾಗುತ್ತಿರುವ ರೀತಿಯನ್ನು ಕವಿ ವ್ಯಂಗ್ಯವಾಡುತ್ತಾರೆ.

ಭಾರತೀಯ ಪರಂಪರೆಯ ಇತಿಹಾಸ ಆಧ್ಯಾತ್ಮದ ನೆಲೆಯಿಂದ ಈ ದೇಶದ ಪ್ರತಿಯೊಂದನ್ನು ಪ್ರಭಾವಿಸಿದೆ ಮತ್ತು ಅದರಿಂದಾಚೆಗೆ ಸತ್ಯವನ್ನು ಶೋಧಿಸಲಾಗದ ಸ್ಥಿತಿಗೆ ದೂಡಿರುವ ದುಷ್ಟರ ಹುನ್ನಾರವನ್ನು ಕವಿ ಸಾಮಾಜಿಕವಾಗಿ ಸೃಷ್ಟಿಸಿರುವ ಮಿಥ್‌ಗಳನ್ನು ನಿದರ್ಶನವಾಗಿಟ್ಟುಕೊಂಡು ತಿಳಿಯಪಡಿಸುತ್ತಾರೆ.

*"ಇಲ್ಲಿ ಹರಿಯೋ ನೀರು*
*ನೀರಲ್ಲ ಸ್ವಾಮಿ, ತೀರ್ಥವೆನ್ನುವರು*
*ಇಲ್ಲಿ ನೆಟ್ಟ ಕಲ್ಲು*
*ಕಲ್ಲಲ್ಲ ಸ್ವಾಮಿ, ದೇವರೆನ್ನುವರು*
*ಇಲ್ಲಿ ಬಡಿಯೋ ಸಾವು*
*ಸಾವಲ್ಲ ಸ್ವಾಮಿ, ಮೋಕ್ಷವೆನ್ನುವರು"*[5]

ಕಾಣುವ ಎಲ್ಲದಕ್ಕೂ ಅಗೋಚರ ಸಂಗತಿಗಳನ್ನು ಆರೋಪಿಸಿ ನೋಡುವ ವಿಚಿತ್ರ ಸಂಗತಿಗಳನ್ನು ಕವಿ ಇಲ್ಲಿ ಅನಾವರಣಗೊಳಿಸಿದ್ದಾರೆ. 'ಕಲ್ಲು ಮನೆಯ ಮಾಡಿ, ಕಲ್ಲು ದೇವರ ಮಾಡಿ' ಎನ್ನುವ ವಚನಕಾರರ ಮಾತಿನಂತೆ ಈ ದೇಶದೊಳಗೆ ಪ್ರತಿಯೊಂದನ್ನು ದೇವರಿಗೆ ಆರೋಪಿಸಿ ನೋಡುವ ಕ್ರಮವನ್ನು ಅನಾದಿ ಕಾಲದಿಂದಲೂ ಮಾಡುತ್ತಾ ಬರಲಾಗಿದೆ. ಯಾವ ಹಿನ್ನೆಲೆಯೊಳಗೆ ಈ ತರ್ಕರಹಿತ ಆಲೋಚನಾ ಕ್ರಮಗಳು ಮುಂದು ಮಾಡಿದವು ಎಂಬುದಕ್ಕೆ ನಿಖರ ಆಧಾರಗಳಂತೂ ಲಭ್ಯವಿಲ್ಲ. ಆದರೆ ಒಂದು ಅಭಿಪ್ರಾಯದಂತೆ "ನಿಸರ್ಗದ ನಿಗೂಢತೆಯಲ್ಲಿ ದೇವರ ನಂಬಿಕೆಯ ಆರಂಭಿಕ ಹಂತವನ್ನು

---
[4]. ಬರಗೂರು ರಾಮಚಂದ್ರಪ್ಪ., ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು., ಪು.27.
[5]. ಬರಗೂರು ರಾಮಚಂದ್ರಪ್ಪ., ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು., ಪು.63

ಗುರುತಿಸಬಹುದು. ಕಾಡು, ಮೇಡು, ಗುಹೆ ಮುಂತಾದ ಕಡೆಗಳಲ್ಲಿ ವಾಸಿಸುತ್ತಿದ್ದ ಜನರು ಮಳೆಯನ್ನು ಕಂಡರು; ಮೋಡದೊಳಗಿನ ಗುಡುಗನ್ನು ಕೇಳಿ ಬೆಚ್ಚಿದರು. ಸಿಡಿಲಿಗೆ ಭಯಪಟ್ಟರು. ಬಿರುಗಾಳಿಯಿಂದ ಬೆದರಿದರು. ಸೂರ್ಯನ ಹಗಲು–ಬಿಸಿಲು ಮತ್ತು ಚಂದ್ರನ ರಾತ್ರಿ–ಬೆಳದಿಂಗಳ ವಿಶೇಷ ಅನುಭವ ಪಡೆದರು. ಈ ಕತ್ತಲು–ಬೆಳಕಿನ ಸ್ಥಿತ್ಯಂತರಗಳು ಪ್ರಶ್ನೆಗಳಾದವು. ನಿಸರ್ಗದ ನಿಗೂಢ ನಡೆಗಳು ಕಾಣಿಸತೊಡಗಿದವು. ಆಗ ಜನರಿಗೆ ತಮ್ಮಿಂದ ಅತೀತವಾದ ಯಾವುದೋ 'ಶಕ್ತಿ'ಯಿದ್ದು ಅದರ ಮೂಲಕ ಈ ಎಲ್ಲವೂ ಸಂಭವಿಸುತ್ತಿವೆ ಎನ್ನಿಸಿರಬೇಕು. ಈ ಶಕ್ತಿಯೇ ಮುಂದೆ ಆರಾಧಿಸುವ ದೇವರಾಗಿರಬಹುದು."[6] ಎನ್ನುವ ಹಂತದಿಂದ ಆರಂಭಗೊಂಡ ಈ ಕಲ್ಪನೆ ಅಗೋಚರವಾದ 'ದೇವರು' ಎನ್ನುವ ಪರಿಕಲ್ಪನೆಯನ್ನೇ ಮುಂದು ಮಾಡಿಕೊಂಡ ಪುರೋಹಿತಶಾಹಿ ವ್ಯವಸ್ಥೆ ಜನಸಾಮಾನ್ಯರನ್ನು ಸುಲಿಗೆ ಮಾಡುವ ಅಸ್ತ್ರವಾಗಿ ಉಪಯೋಗಿಸಿಕೊಂಡಿತು. ತಮಗೆ ಅನುಕೂಲವಾದ ವ್ಯವಸ್ಥೆಯೊಂದನ್ನು ಸೃಷ್ಟಿಸಿಕೊಳ್ಳಲು ಗೋಚರಿಪ ಸಕಲದರಲ್ಲಿಯೂ ದೇವರನ್ನು ಕಾಣಲು ಜನಸಾಮಾನ್ಯರನ್ನು ಹುರಿದುಂಬಿಸಿತು. ನದಿ, ಕಲ್ಲು, ಮಣ್ಣು ಇಂತಹವುಗಳನ್ನೆಲ್ಲ ಜನಪದರು ದೇವರೆಂದು ಪೂಜಿಸಿದ್ದು ನಾಗರೀಕತೆಯ ಒಂದು ಹಂತವಾದರೆ, ಕಾಣದ ಕಲ್ಪನೆಯನ್ನೇ ವಿಜೃಂಭಿಸಿ ಜನರನ್ನು ಅಜ್ಞಾನದ ಕೂಪಕ್ಕೆ ತಳ್ಳುವಂತೆ ಮಾಡಿದ ದುರುಳರ ಅನಾಗರೀಕ ಮಜಲು ಮತ್ತೊಂದು. ಇಂತಹ ಪುರೋಹಿತಶಾಹಿ ವಿಷವರ್ತುಲದಿಂದ ಪಾರಾಗುವ ಅರಿವಿನ ದೀಪವನ್ನು ಕವಿ ಹಚ್ಚಲು ಪ್ರಯತ್ನಿಸಿದ್ದಾರೆ. ಬಡತನಕೆ, ಸಿರಿತನಕೆ ಪಾಪ–ಪುಣ್ಯದ ಲೆಕ್ಕವಿರಿಸಿರುವ ಈ ನೆಲದ ಸಾಮಾಜಿಕ ದುಸ್ಥಿತಿಯನ್ನು ನೆನೆದು ಮರುಕ ಪಡುತ್ತಾರೆ.

ಬದುಕಿನ ಎಲ್ಲ ಸಂಗತಿಗಳಿಗೂ ವಿಶೇಷವಾಗಿ ತಮ್ಮ ದುರ್ಗತಿಗೆ ಕಾರಣವಾದ 'ವಿಧಿ' ಎನ್ನುವ ಪರಿಕಲ್ಪನೆಯ ಸುತ್ತ ಅಂದರೆ ತಮ್ಮ ಈ ದುರ್ಗತಿಗೆ 'ಹಣೆಬರಹ' ವೆಂಬ ಸಂಗತಿಯನ್ನು ಮುಂದು ಮಾಡಿ ವಿನಾಯಿತಿ ಪಡೆಯುವ ಮಂದಿಗೇನೂ ಇಲ್ಲಿ ಕೊರತೆಯಿಲ್ಲ. ಈ ಬಗೆಯ ಕಲ್ಪನೆಗಳನ್ನು ಸೃಷ್ಟಿಸಿ ಸ್ವಾರ್ಥ ಹಿತಚಿಂತನೆಯನ್ನು ಮುಂದು ಮಾಡುವ ದುರುಳರಿಗೆ 'ಎಚ್ಚರಿಕೆ' ಎನ್ನುವ ಕವಿತೆ ಎಚ್ಚರಿಕೆ ನೀಡುವಂತಿದೆ.

***"ಹಣೆಬರಹದಣೆಕಟ್ಟು***

***ಜಾತಿಮತಗಳ ಸುಟ್ಟು***

***ಬಂದೇವು ಬಡವರು***

***ಹೊಸ ಪಂಜು ಹಿಡಿದು"[7]***

ಬಂಡಾಯ ಸಾಹಿತ್ಯ ಪಂಥದ ಪ್ರಧಾನ ಒಳತೋಟಿಯನ್ನು ತೆರೆದಿಡಬಲ್ಲ ಮುಖ್ಯ ಕವಿತೆಗಳಲ್ಲಿ 'ಎಚ್ಚರಿಕೆ' ಕವಿತೆಯೂ ಒಂದು. ಸ್ಥಾಪಿತ ಮತ ಮೌಢ್ಯಾಚರಣೆಗಳ ವಿರುದ್ಧ, ಹಣೆಬರಹಗಳೆಂಬ ಅಂಧಕಾರದ ಅವಿವೇಕಗಳ ವಿರುದ್ಧ ಒಂದು ಬಗೆಯ ಪ್ರತಿರೋಧ ಇಲ್ಲಿ ಮಾರ್ದನಿಸಿದೆ. "ಸಾಹಿತ್ಯ ಸೃಜನೆಯೊಂದೇ ಬಂಡಾಯ ಸಾಹಿತ್ಯ ಚಳವಳಿಯ ಮುಖ್ಯ ಗುರಿ ಆಗಬಾರದು. ಬದುಕು ಹಸನಾಗಿ

[6]. ಬರಗೂರು ರಾಮಚಂದ್ರಪ್ಪ., ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು., ಲೇಖಕರ ಮಾತು ಭಾಗದಿಂದ

[7]. ಅದೇ., ಪು.67

ಅನಕ್ಷರತೆಯಿಂದ ತೊಳಲುವ, ಬಳಲುವ, ಜನರ ಬದುಕಿಗೆ ಹೊಸ ಶಕ್ತಿ, ಸಾಮರ್ಥ್ಯ ಕೊಡುವಂತಾಗಬೇಕು"[8] ಎನ್ನುವ ಮಹತ್ವದ ಯೋಚನೆಯಿಂದ 'ಸಾಹಿತ್ಯಕ್ಕಾಗಿ ಸಾಹಿತ್ಯ' ಎನ್ನುವ ಭಾವದಿಂದ ದೂರವಾಗಿ 'ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ನಾಗಿ ತಮ್ಮ ಯೋಚನೆ, ಆಲೋಚನೆಗಳನ್ನು ಕಾವ್ಯವಾಗಿಸಿದ ಬರಗೂರರ ಸದಾಶಯವೂ ಇಲ್ಲಿ ವ್ಯಕ್ತಗೊಂಡಿದೆ. 'ದೇವರು' ಹಣೆಬರಹ ಬರೆಯಲು ಸಾಧ್ಯವೆ? ಜಾತಿ, ಮತಗಳಿಗೆ ಮತ್ತು ಅವುಗಳಿಂದಾಗುತ್ತಿರುವ ಅನಾಹುತಗಳಿಗೆ ದೇವರು ಕಾರಣನೆ? ಇವೆಲ್ಲವೂ ಮನುಷ್ಯ ಸೃಷ್ಟಿಸಿಕೊಂಡ ಅಮಾನವೀಯ ಕೃತ್ಯಗಳು. ಯಾವುದು ಜೀವದನಿಯಾಗಿ ಮನುಷ್ಯನನ್ನು ಉದ್ಧರಿಸದೇ ಅಸಮಾನತೆಗೆ ಕಾರಣವಾಗುತ್ತದೆಯೋ ಅದನ್ನು ದೇವರೆನ್ನಲು ಸಾಧ್ಯವಾಗುವುದಾದರೂ ಹೇಗೆ? ಮುಂತಾದ ಪ್ರಶ್ನೆಗಳು ಬಹಳವಾಗಿ ಕಾಡುತ್ತವೆ.

> ***"ಧರ್ಮದ ಹೆಸರು ದೇಶದ ತುಂಬ***
>
> ***ಸಾವಿರ ಸಾವಿರ ಸಾವುಗಳು***
>
> ***ಮಂದಿರ ಮಸೀದಿ ಜಿದ್ದಿಗೆ ಬಿದ್ದು***
>
> ***ನರಳುವ ಅಸಂಖ್ಯ ನೋವುಗಳು."[9]***

'ಹಿಂದೂ, ಮುಸ್ಲಿಂ ಭಾಯಿ ಭಾಯಿ' ಎನ್ನುವ ವಿಶಾಲ ಮನೋಭೂಮಿಕೆಯಿಂದ ದೂರ ಉಳಿದು ತಮ್ಮ ರಾಜಕೀಯ ಷಡ್ಯಂತ್ರಗಳಿಗಾಗಿ ಧರ್ಮವನ್ನು ಮುನ್ನೆಲೆಗೆ ತಂದು ಸಾವಿರಾರು ಸಂಖ್ಯೆಯಲ್ಲಿ ನೋವು–ಸಾವುಗಳಿಗೆ ಕಾರಣವಾಗುತ್ತಿರುವ ಬಗೆಗೆ ಕವಿ ಮರುಗಿದ್ದಾರೆ. ಧಾರ್ಮಿಕ ಮೂಲಭೂತವಾದ ತಂದೊಡ್ಡಿರುವ ಅಪಾಯದ ಸನ್ನಿವೇಶವನ್ನು ತಿಳಿಸುತ್ತಾರೆ. "ನಮ್ಮ ದೇಶದಲ್ಲಿ ಮಂದಿರ, ಮಸೀದಿಗಳು ರಾಜಕೀಯ ಲಾಭದ ಕೇಂದ್ರಗಳಾಗುತ್ತಿವೆ. ಮತಮಾನ್ಯಗಳು ಆಸ್ತಿ, ಅಧಿಕಾರಗಳನ್ನು ಅನುಭವಿಸುವ ಜಾತಿ ಸಂಘಟನ ಸಂಸ್ಥೆಗಳಾಗಿ ಬೆಳೆಯುತ್ತಿವೆ. ಜಾತಿ, ಧರ್ಮ, ದೇವರ ಹೆಸರಲ್ಲಿ ಉದ್ಯಮಶೀಲತೆಯನ್ನು ಪ್ರದರ್ಶಿಸುತ್ತಿವೆ. ಧರ್ಮೋದ್ಯಮದ ಉದಯವನ್ನು ಸಾರಿ ಹೇಳುತ್ತಿವೆ."[10] ಎಂಬ ಕವಿಯ ಮಾತುಗಳು ಧರ್ಮವನ್ನು ಉದ್ಯಮವಾಗಿಸುತ್ತಿರುವ ಬಗೆಗಿನ ಅಪಾಯವನ್ನೂ ತಿಳಿಸುತ್ತಿವೆ. ಇದು ಜಾತ್ಯಾತೀತ ದೇಶವೊಂದರ ಅಡಿಪಾಯವನ್ನೇ ಅಲುಗಾಡಿಸಬಲ್ಲ ಸಂಗತಿಯಾಗಿದೆ ಎನ್ನುವುದನ್ನು ಎಚ್ಚರಿಕೆಯಿಂದ ಆಲೋಚಿಸಬೇಕಾಗಿದೆ. ಭಾರತದಲ್ಲಿ ವಿಶೇಷವಾಗಿ ಹಿಂದೂ ಮತ್ತು ಮುಸಲ್ಮಾನರ ನಡುವೆ ನಡೆಯುವ ಸಂಘರ್ಷಗಳು ತಾರಕಕ್ಕೇರಿ ಬಿಡುತ್ತವೆ. ರಾಮಮಂದಿರ ಮತ್ತು ಬಾಬ್ರಿ ಮಸೀದಿಗೆ ಸಂಬಂಧಿಸಿದಂತೆ ನಡೆದ ಸಂಘರ್ಷದ ಸಂದರ್ಭದಲ್ಲಿ ಪ್ರತಿಕ್ರಿಯೆಯಾಗಿ ಮೇಲಿನ ಕವಿತೆ ಮೂಡಿ ಬಂದಿದೆ.

"ಮಂದಿರ ಮಸೀದಿಗೆ ಸಂಬಂಧಿಸಿದ ಅನಾರೋಗ್ಯಕರ ಘಟನೆಗಳು ಧರ್ಮವನ್ನು ಆರ್ಥಿಕ ಮತ್ತು ರಾಜಕೀಯ ಲಾಭದ ಸಾಧನವಾಗಿಸಿ ಭಕ್ತಿ ಮತ್ತು ಆಧ್ಯಾತ್ಮದ ಆಯಾಮವನ್ನು 'ಅಭಿನಯ'ದಲ್ಲಿ ಪ್ರಕಟಿಸತೊಡಗಿದೆ. ಅಯೋಧ್ಯೆಯ ಶ್ರೀ ರಾಮ ದೇವಾಲಯದ ಮೇಲಿನ ದಾಳಿಯನ್ನು ಧಾರ್ಮಿಕವಾಗಿ

---

[8]. ಸತ್ಯಾನಂದ ಪಾತ್ರೋಟ., ಒಂದಿಷ್ಟು ಕ್ಷಣಗಳು., ಪು.58

[9]. ಬರಗೂರು ರಾಮಚಂದ್ರಪ್ಪ., ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು., ಪು.84.

[10]. ಬರಗೂರು ರಾಮಚಂದ್ರಪ್ಪ., ಶಬ್ದವಿಲ್ಲದ ಯುದ್ಧ., ಧರ್ಮೋದ್ಯಮದ ನಾಡಿನಲ್ಲಿ., ಪು.170.

ಮತ್ತು ರಾಜಕೀಯವಾಗಿ ಬಂಡವಾಳ ಮಾಡಿಕೊಳ್ಳುವ ಪ್ರಯತ್ನಗಳು ನಡೆದದ್ದರ ಹಿಂದೆ ಲಾಭದ ಲೆಕ್ಕಾಚಾರವೇ ಇತ್ತು; ನೈತಿಕತೆ ಇರಲಿಲ್ಲ."[11] ಎನ್ನುವ ಅವರ ಮಾತುಗಳು ಕವಿತಾ ರಚನೆಯ ಹಿಂದಿನ ಉದ್ದೇಶವನ್ನು ಸ್ಪಷ್ಟಪಡಿಸುತ್ತವೆ. ಯಾವ ಧರ್ಮದಲ್ಲಿನ ಯಾವ ದೇವರು ಈ ಬಗೆಯ ಅಮಾನವೀಯ ನಡೆಯನ್ನು ಬೋಧಿಸಿದ್ದಾನೆ? ಎಂಬುದು ಅರ್ಥವಾಗದ ಸಂಗತಿ. ತಮ್ಮ ಧರ್ಮವೇ ಶ್ರೇಷ್ಠವೆಂಬ ವ್ಯಸನಕ್ಕೆ ಬಿದ್ದಾಗ ಬಿರುಗಾಳಿಗೆ ಸಿಕ್ಕ ತರಗೆಲೆಯಂತೆ ಬದುಕು ಅತಂತ್ರವಾಗುತ್ತದೆ. ಎರಡೂ ಧರ್ಮಗಳಲ್ಲಿ ನಡೆಯುತ್ತಿರುವ ಧಾರ್ಮಿಕ ಮೂಲಭೂತವಾದದ ಸ್ವರೂಪದ ವಿಶ್ಲೇಷಣೆಯನ್ನು ಕವಿಯ ಮಾತುಗಳು ಹೀಗೆ ಸ್ಪಷ್ಟಪಡಿಸುತ್ತವೆ. "2001ನೇ ಡಿಸೆಂಬರ್ 12ರಂದು ಪಾರ್ಲಿಮೆಂಟ್ ಭವನದ ಮೇಲೆ ಉಗ್ರರ ದಾಳಿ ನಡೆಯಿತು; ಉಗ್ರಗಾಮಿಗಳು ಗಣ್ಯರಿಗೆ ಮೀಸಲಾದ ಪ್ರವೇಶದ್ವಾರದಿಂದಲೇ ಒಳ ಬಂದಿದ್ದರು. 2002ರ ಸೆಪ್ಟೆಂಬರ್ 24ರಂದು ಗಾಂಧಿನಗರದ 'ಅಕ್ಷರಧಾಮ ದೇವಾಲಯ'ದ ಮೇಲೆ ಉಗ್ರರು ದಾಳಿ ಮಾಡಿದ ಸಂದರ್ಭದಲ್ಲಿ 33 ಜನ ನಾಗರಿಕರು ಸಾವನ್ನಪ್ಪಿದರು. ಉಗ್ರರ ವಿರುದ್ಧ ಹೋರಾಡುತ್ತಾ ಮೊದಲು ಸತ್ತ ಪೋಲೀಸ್ ಮುಸ್ಲಿಂ ಬಂಧುವಾಗಿದ್ದನೆಂಬುದನ್ನು ಹಿಂದೂ ಮೂಲಭೂತವಾದಿಗಳು ಗಮನಿಸಬೇಕು. ಜೀವಹಾನಿ ಮಾಡುವ ಅರಾಜಕ ಹಾಗೂ ಅಮಾನವೀಯ ಉಗ್ರಗಾಮಿಗಳು ಮುಸ್ಲಿಮರಾಗಲಿ, ಹಿಂದೂಗಳಾಗಿರಲಿ, ಯಾವುದೇ ಧರ್ಮದ ಮೂಲಭೂತವಾದಿಗಳಾಗಿರಲಿ ಖಂಡನಾರ್ಹರು. ಅಂತೆಯೇ ಬೆಂದ ಮನೆಯಲ್ಲಿ ಗಳ ಇರಿಯುವವರು ಸಹ ಖಂಡನಾರ್ಹರು. ದೇಶಭಕ್ತಿಯು ಯಾವುದೇ ಒಂದು ಧರ್ಮದ, ಒಂದು ಪಕ್ಷದ ಗುತ್ತಿಗೆಯಲ್ಲ........ಶ್ರೀ ರಾಮ ದೇವಾಲಯ, ಅಕ್ಷರಧಾಮಗಳನ್ನು ನಾಶ ಮಾಡಲು ನುಗ್ಗಿದ ಮುಸ್ಲಿಂ ಉಗ್ರಗಾಮಿಗಳನ್ನು ಖಂಡಿಸುವುದು ಎಷ್ಟು ಸರಿಯೋ; ಬಾಬರಿ ಮಸೀದಿಯನ್ನು ಧ್ವಂಸ ಮಾಡಲು ಯತ್ನಿಸಿದ ಹಿಂದೂ ಮೂಲಭೂತವಾದಿಗಳನ್ನು ಮತ್ತು ಹೊರ ದೇಶಕ್ಕೆ ರಕ್ಷಣಾ ರಹಸ್ಯಗಳನ್ನು 'ಮಾರಿದ' ಹಿಂದೂ ಮೂಲದ ವಿಜ್ಞಾನಿಗಳನ್ನು ಖಂಡಿಸುವುದು ಅಷ್ಟೇ ಸರಿಯಾದ ಸಂಗತಿ."[12] ಎನ್ನುವ ಅವರ ನಿಲುವು ಮಾನವೀಯ ನೆಲೆಯ ಧಾರ್ಮಿಕ ಸತ್ಯವನ್ನು ಶೋಧಿಸುವ ಸರಿಯಾದ ಮಾರ್ಗವನ್ನು ತೋರಿಸುವಂತಿದೆ. ಜೊತೆಗೆ ಇದೆಲ್ಲವುಗಳ ಹಿನ್ನೆಲೆಯಲ್ಲಿ ಮನುಷ್ಯತ್ವವನ್ನು ಸಾರುವ ಧರ್ಮದ ಅಗತ್ಯವನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆಯನ್ನು ಈ 'ಕವಿತೆ' ಸಾರುತ್ತಿದೆ.

***"ಕಲ್ಲು ಕೋಟೆಯ ಬೆವರು, ಗುಡಿಯ ಗೋಪುರ ಸೂರು***
***ಅಣೆಕಟ್ಟ ನಿಟ್ಟುಸಿರು, ನೀರಾದ ನಂಬಿಗನು***
***ಓಣಿ ಓಣಿಯ ಪೊರಕೆ, ಶುದ್ಧ ಬಯ್ಗಳ ಹರಕೆ***
***ಗುಡಿಸುತ್ತ ಗುಡಿ–ಸುತ್ತ ತಾನೇ ಕಸವಾದವನು"[13]***

ಇಡೀ ಸಮಾಜವನ್ನು ಬೆವರಿನ ಮೂಲಕವೇ ನಿರ್ಮಿಸಿದ ಶ್ರಮ ಪ್ರಧಾನ ವರ್ಗದ ಕುರಿತು ಕವಿ ಇಲ್ಲಿ ಮಾತನಾಡಿದ್ದಾರೆ. ಇಡೀ ಕವಿತೆ ಗುಲಾಮಿ ಮನಸ್ಥಿತಿಯಲ್ಲಿ ನೊಂದವರ ಬದುಕಿನ ಅನಾವರಣ ಮಾಡುತ್ತಿದೆ. ಕಲ್ಲು ಕೋಟೆಗಳು, ಗುಡಿ–ಗೋಪುರಗಳು, ಅಣೆಕಟ್ಟುಗಳು ಹೀಗೆ ಬಹುಪಯೋಗಿಯಾದ

[11]. ಅದೇ., ಪು.170.
[12]. ಬರಗೂರು ರಾಮಚಂದ್ರಪ್ಪ., ಶಬ್ದವಿಲ್ಲದ ಯುದ್ಧ., ಧರ್ಮೋದ್ಯಮದ ನಾಡಿನಲ್ಲಿ., ಪು.171.
[13]. ಬರಗೂರು ರಾಮಚಂದ್ರಪ್ಪ., ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು., ಪು.89.

ಸಾಮಾಜಿಕ ವ್ಯವಸ್ಥೆಗೆ ಪೂರಕವಾದ ಸಂಗತಿಗಳಲೆಲ್ಲ ದುಡಿದವರು, ಮಡಿದವರು, ನೊಂದವರು, ಕೆಳವರ್ಗದವರು ಮಾತ್ರ. ಆದರೂ ಇವರಿಗೆ ಸಿಕ್ಕಿದ್ದು ಮಾತ್ರ 'ಶುದ್ಧ ಬಯ್ಗುಳ', 'ಗುಡಿಸುತ್ತ ತಾವೇ ಕಸವಾದ' ಫಲ ಮಾತ್ರ, ಇಲ್ಲಿ ಬೆವರಿನ ಮೂಲಕ ಇಡೀ ವ್ಯವಸ್ಥೆಯನ್ನು ರೂಪಿಸಿದವರನ್ನು ಕವಿ 'ದೇವರೆಂದು ಪರಿಭಾವಿಸುತ್ತಾರೆ.' ಈಗಿನ ವಾಸ್ತವವೆಂದರೆ ಸಮಾಜ ಮತ್ತು ಸಂಸ್ಕೃತಿಗಳ ಸೃಷ್ಟಿರೂಪವಾದ 'ಬೆವರು' ನಿರಂತರವಾಗಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತಾ ಬಂದಿದೆ. 'ಬಲ' ಮತ್ತು ಬುದ್ಧಿಗಳು ತಮ್ಮದೇ ವರ್ಗ ಹಿತಾಸಕ್ತಿಯನ್ನು ಬೆಳೆಸಿಕೊಂಡಿವೆ; ಬಲವು ಆಳುವ ವರ್ಗವಾಗಿ ಬಂಡವಾಳ ಶಾಹಿಯ ಹಿತಾಶಕ್ತಿಯನ್ನು ರಕ್ಷಿಸುತ್ತಿದ್ದರೆ, ಬುದ್ಧಿಯು ಶಿಕ್ಷಣ ಹಾಗೂ ಸಂಸ್ಕೃತಿಯ ಮೂಲ ಗುತ್ತಿಗೆದಾರನಾಗಿ ಪ್ರಭಾವ ಬೀರುತ್ತಿದೆ. ಬೆವರಿನಿಂದ ಬುದ್ಧಿ ಬಲಗಳಿಗೆ ಸ್ಥಳಾಂತರಗೊಂಡವರು ಕೂಡ ಬೆವರಿನ ಮೂಲವನ್ನು ಮರೆಯುತ್ತಿದ್ದಾರೆ. ನಿಸರ್ಗದ ನಿಗೂಢತೆಯ ಕಾಡುವಿಕೆಯಿಂದ 'ಬೆವರು' ಕಂಡುಕೊಂಡ ಅಗೋಚರ ಶಕ್ತಿಗಳು ಈಗ ಭೌತಿಕ ಮಾತ್ರವಾಗಿ ಉಳಿಯದೆ ಭೌತಿಕ ಲಾಭದ ಸಾಧನವಾಗಿಬಿಟ್ಟಿವೆ. ಬಲ ಮತ್ತು ಬುದ್ಧಿ ರೂಪಕಗಳು ಬೆವರನ್ನು ಶೋಷಣೆ ಮಾಡುತ್ತಿವೆ. ಸಮಾಜ ಮತ್ತು ಸಂಸ್ಕೃತಿಗಳ ಇತಿಹಾಸವನ್ನೇ ನಿರ್ಮಿಸಿದ ಜನರ ಬೆವರು, ದೇವರ ದೇವರೆಂದು ದೇಶಕ್ಕೆ ದೇಶವೇ ಭಾವಿಸಬೇಕಾಗಿದೆ."[14] ಎಂಬ ಬರಗೂರರ ಮಾತಿನಲ್ಲಿ ತಥ್ಯವಿದೆ. 'ದೇವರು' ಎಂದು ಕರೆಯಲಾಗುತ್ತಿರುವ ಅಗೋಚರ ಶಕ್ತಿಯ ಕಲ್ಪನೆಯೂ ಈ ಬೆವರಿನ ಮೂಲದಿಂದಲೇ ಹುಟ್ಟಿರಬೇಕೆಂದು ಕವಿ ಊಹಿಸುತ್ತಾರೆ.

***"ಅಣು ಬಾಂಬುಗಳು ಅಗೋಚರವಾಗಿವೆ***
***ಮಾನವ ಬಿಂಬದಲಿ***
***ಧರ್ಮದ ಹೆಸರು ದೇವನ ರೂಪ***
***ಅರಮನೆ ಕಂಬದಲಿ."[15]***

ಮೇಲ್ನೋಟಕ್ಕೆ ಶಾಂತಿ ಸಾರುವ ಮಂತ್ರ ಜಪಿಸುತ್ತಿರುವ ಆಧುನಿಕ ಜಗತ್ತು ಯಾವ ಕ್ಷಣದಲ್ಲಿಯಾದರೂ ಜಗತ್ತು ನಾಶ ಮಾಡಬಲ್ಲ ಅಣುಬಾಂಬುಗಳನ್ನು ಹುದುಗಿಸಿಕೊಂಡಿದೆ. ಧರ್ಮ, ದೇವರ ಹೆಸರಿನಲ್ಲಿ ಮೇಲ್ನೋಟಕ್ಕೆ ಮಾತ್ರವೇ ಕಾಣುವ 'ಶಾಂತಿ ಸ್ಥಾಪನೆ'ಯ ಉದ್ದೇಶವಿರುವಂತೆ ಕಾಣುತ್ತಿರುವ ಆಧುನಿಕ ಜಗತ್ತಿನ ಅಭಿನಯ ಅತ್ಯಂತ ದೊಡ್ಡ ಕಚಿಡಿಚಿಜಂಥ ನಂತೆ ಕಾಣುತ್ತಿದೆ ಎಂದು ಕವಿ ಭಾವಿಸುತ್ತಾರೆ. ಹಾಗೆ ನೋಡಿದರೆ "ದೇವರ ಬಗ್ಗೆ ನಂಬಿಕೆಯಿಲ್ಲದ ದೇಶವಿಲ್ಲ. ಹೀಗೆಂದ ಕೂಡಲೇ ಕಮ್ಯುನಿಸ್ಟ್ ದೇಶಗಳಲ್ಲಿ ದೇವರ ಕುರಿತು ನಂಬಿಕೆ ಇದೆಯೇ ಎಂದು ಹುಬ್ಬೇರಬಹುದು. ಕಮ್ಯುನಿಸ್ಟ್ ಸರ್ಕಾರಗಳನ್ನು ಹೊಂದಿದ ದೇಶಗಳು ನಾಸ್ತಿಕವಾದವನ್ನು ಪ್ರತಿಪಾದಿಸಿದರೂ ದೇವರ ಬಗೆಗಿನ ಜನರ ನಂಬಿಕೆಯನ್ನು ಸಂಪೂರ್ಣ ನಿಷೇಧಿಸಿಲ್ಲ. ಕ್ರಾಂತಿಕಾರಿ ಲೆನಿನ್ ತಮ್ಮ ಪಕ್ಷದಲ್ಲಿ ಧಾರ್ಮಿಕ ನಂಬಿಕೆಯುಳ್ಳವರಿಗೂ ಅವಕಾಶ ನೀಡಿದ್ದರು. ಮುಂದೆ ಬ್ರೆಜ್ನೀವ್, ಕ್ರುಶ್ಚೋವ್ ಕಾಲದಲ್ಲಿ ಜನರು ಅವರವರ

---

[14]. ಬರಗೂರು ರಾಮಚಂದ್ರಪ್ಪ., ದೇವರ ದೇವರು ಜನರ ದೇವರು., ಪ್ರಜಾವಾಣಿ ಅಂಕಣ ಬರೆಹ ದಿನಾಂಕ : 12–08–2020.
[15]. ಬರಗೂರು ರಾಮಚಂದ್ರಪ್ಪ., ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು., ಪು.131.

ನಂಬಿಕೆಯಲ್ಲಿ ಬದುಕುವ 'ಆಶಯ ಮತ್ತು ಅವಕಾಶಗಳು ವಿಸ್ತರಣೆಗೊಂಡವು"[16] ಹೀಗೆ ದೇವರು ಮತ್ತು ಧರ್ಮದ ನೆರಳು ಜಗತ್ತಿನ ಎಲ್ಲೆಡೆ ಹರಡಿವೆ ಆದರೂ ಇವುಗಳಿಂದ ಮನುಷ್ಯನಿಗೆ ಆಗುತ್ತಿರುವ ಉಪಕಾರವೇನು? ಎಂದರೆ ಉತ್ತರ ನೀಡುವುದು ಅಷ್ಟು ಸುಲಭವಲ್ಲ. ನಿಜವಾಗಿ ಮಾನವನ ಶಾಂತಿ–ಸೌಹಾರ್ದ ಬದುಕಿನ ದಾರಿದೀಪವಾಗಬೇಕಿದ್ದ ಈ ಪರಿಕಲ್ಪನೆಗಳು ವೈಷಮ್ಯದ ವಸ್ತುಗಳಾದದ್ದು ವಾಸ್ತವ ಜಗತ್ತಿನ ದುರಂತವೆಂಬುದು ಕವಿಯ ಅಳಲು.

*"ಪೂಜೆಯಿಲ್ಲದೆ ಪೂಜ್ಯನಾದನು*
*ಭೂಮಿ ಬೆಳಕಿನ ರಾಜ್ಯವಾದನು*
*ಕಲ್ಲು ಕರಗುವ ಕಾವ್ಯವಾದನು*
*ಪಾಪದ ಬಾಳಿಗೆ ಪ್ರಶ್ನೆಯಾದನು"*[17]

'ಬುದ್ಧ' ಎಂಬ ಶೀರ್ಷಿಕೆಯ ಈ ಕವಿತೆ ಅಸಮಾನತೆಯ ಗೂಡಾಗಿರುವ ಈ ನಾಡಿಗೆ ಸಮಾನತೆಯ, ಶಾಂತಿಯ ಸಂದೇಶ ಸಾರಿದ ಬುದ್ಧನ ಜೀವನ ಮತ್ತು ಬೋಧನೆ ನಮಗೆ ಆದರ್ಶವಾಗಬೇಕು ಎಂಬ ಸಾರವನ್ನು ತನ್ನ ಒಡಲಲ್ಲಿ ಇರಿಸಿಕೊಂಡಿದೆ. ಧರ್ಮಗಳು ಹುಟ್ಟು ಹಾಕಿರುವ ಅಪಸವ್ಯಗಳ ವಿರುದ್ಧ ಆದರ್ಶ ಬದುಕಿಗೆ ಬೆಳಕಾಗಬಲ್ಲ ಒಲುಮೆಯ ಸೆಲೆಯಾಗಿ ಬುದ್ಧದೇವ ಕಾಣುತ್ತಾನೆ. ಎಲ್ಲವೂ ಇದ್ದು ಏನು ಇಲ್ಲದಂತಾದ, ಬದುಕಿನ ಸತ್ಯ ಶೋಧನೆ ಮಾಡಲು ಹೊರಟ ಈತನ ಮಾರ್ಗವೇ ವಾಸ್ತವ ಬದುಕಿಗೆ ಹತ್ತಿರವಾದಂತೆ ಕವಿಗೆ ಕಾಣುತ್ತದೆ. ನೆತ್ತರ ಸಾಮ್ರಾಜ್ಯವ ತ್ಯಜಿಸಿ, ಶಾಂತಿ ನಾಡಿನ ಕನಸ ಹೊತ್ತವನು; ಪೂಜೆಯಿಲ್ಲದೆ ಪೂಜ್ಯತೆಗೇರಿದವನು ಮುಂತಾಗಿ ಬುದ್ಧನ ಅನುಕರಣೀಯ ನಡೆಯನ್ನು ಕವಿ ಶ್ಲಾಘಿಸುತ್ತಾರೆ. ಬುದ್ಧ ದೇವನ 'ಪಂಚಶೀಲ ತತ್ವ' ಗಳೆಂಬ ಬೋಧನೆಗಳು ಶ್ರೇಷ್ಠವೂ ಸಾರ್ವಕಾಲಿಕವೂ ಆಗಿವೆ. ಸೌಹಾರ್ದ ಮನುಷ್ಯ ಜೀವನಕ್ಕಾಗಿ ಬೌದ್ಧ ಧರ್ಮದ ಈ ತತ್ವಗಳನ್ನು ಅನುಸರಿಸಬೇಕೆಂಬ ಆಶಯವೂ ಇಲ್ಲಿ ವ್ಯಕ್ತಗೊಂಡಿದೆ. 'ನಿನಗೆ ನೀನೆ ಬೆಳಕು' ಎಂಬ ಮನುಷ್ಯನ ಉದ್ಧಾರದ ಮಾರ್ಗ ತೋರಿದ ಬುದ್ಧನ ಬೋಧನೆಗಳು ಸರಳವೂ ಹಾಗೆಯೇ ವಾಸ್ತವದ ಬದುಕಿಗೆ ಅನುಕರಣೀಯವೂ ಆಗಿದೆ. ಮಾನವ ಸಹಜ ದೌರ್ಬಲ್ಯಗಳನ್ನು ಮೀರಿ ಪೂಜ್ಯತೆಗೇರಿದ ಬುದ್ಧನ ಬದುಕು ಪಡೆದುಕೊಂಡಿರುವ 'ಉನ್ನತಾದರ್ಶನ' ದಲ್ಲಿ ಇಡೀ ಸಾಮಾಜಿಕ ವ್ಯವಸ್ಥೆಗೆ ಬೇಕಾದ ಔಷಧೀಯ ಗುಣಗಳು ಇರುವುದನ್ನು ಕವಿ ತೋರಿಸಿಕೊಟ್ಟಿದ್ದಾರೆ.

*"ನನಗೆ ಗೊತ್ತು–*

*ಧರಣಿ ಕೂತರೆ ಒಂದಿಷ್ಟು ಧರಣಿ ಕೊಡಬಲ್ಲಿರಿ*

*ಹೋರಾಟ ಹೂಡಿದರೆ ಹಣ ಹಂಚಬಲ್ಲಿರಿ*

*ಕಾಲು ಕಟ್ಟಿದರೆ ಕೆಲಸ ಕೊಡಬಲ್ಲಿರಿ*

*ದೇವರೆಂದರೆ ಸಾಕು. ಅಡ್ಡಾಗಿ ಹರಸಬಲ್ಲಿರಿ"*[18]

---

16. ಬರಗೂರು ರಾಮಚಂದ್ರಪ್ಪ., ದೇವರ ದೇವರು ಜನರ ದೇವರು., ಪ್ರಜಾವಾಣಿ ಅಂಕಣ ಬರೆಹ ದಿನಾಂಕ: 12–08–2020.
17. ಬರಗೂರು ರಾಮಚಂದ್ರಪ್ಪ., ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು., ಪು.140.

ಸಂಸದೀಯ 'ಪ್ರಜಾಪ್ರಭುತ್ವ' ವ್ಯವಸ್ಥೆಯಲ್ಲಿನ 'ರಾಜಕೀಯ ದುರೀಣ' ರನ್ನು ಉದ್ದೇಶಿಸಿ ಹೇಳುವ ರಾಜಕೀಯ ವಿಡಂಬನಾತ್ಮಕ ಸ್ವರೂಪದ 'ಒಂದಿಷ್ಟು ಅಳು ಕೊಡುತ್ತೀರಾ' ಎನ್ನುವ ಈ ಕವಿತೆ 'ಪ್ರಜೆಗಳೇ ನಿಜಾರ್ಥದಲ್ಲಿ ಪ್ರಭುಗಳು' ಎಂಬ ಮಾತನ್ನು ಅಣಕವಾಡುವ ರೀತಿಯಲ್ಲಿದೆ. 'ಪ್ರಜಾಪ್ರಭುತ್ವ' ದಲ್ಲಿ ಪ್ರಜೆಗಳು ಪ್ರಭುಗಳಾಗಿದ್ದರೆ ಜನ ಪ್ರತಿನಿಧಿಗಳ ಬಳಿ ಗೋಗರೆಯುವ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಮತ ಕೇಳಲು ಬರುವ ಪ್ರತಿನಿಧಿಗಳು 'ಸೇವೆ' ಗೆಂದು ಕೈ ಮುಗಿಯುತ್ತಾರೆ; ಗೆದ್ದಾದ ಬಳಿಕ ಪ್ರಮಾಣವಚನ ಸಂದರ್ಭದಲ್ಲಿ 'ಅಧಿಕಾರ' ಸ್ವೀಕರಿಸುವ ಪ್ರಕ್ರಿಯೆಯೇ ನಿಜವಾಗಿ ಹಾಸ್ಯಾಸ್ಪದವೆನಿಸುತ್ತದೆ. ಪ್ರಜಾಪ್ರಭುತ್ವದಲ್ಲಿ 'ಅಧಿಕಾರ' ಪ್ರಜೆಗಳ ಬಳಿಯಿರಬೇಕು ಇದೂ ಒಂದು ಬಗೆಯಲ್ಲಿ ಪ್ರಭುತ್ವದ ಅಪಸವ್ಯವೆಂದೇ ಹೇಳಬೇಕಾಗುತ್ತದೆ. ಇಂತಹ ವ್ಯವಸ್ಥೆಯಲ್ಲಿ ಪ್ರತಿಭಟಿಸಿದರೆ ಹತ್ತಿಕ್ಕುವ, ಕಾಲು ಕಟ್ಟಿದರೆ ಕೆಲಸ ಕೊಡಿಸುವ, ಧರಣಿ ಕೂತರೆ ಧರಣಿ ಕೊಡಿಸುವ, ಹೋರಾಟ ನಡೆಸಿದರೆ ಹಣ ಹಂಚಿ ತಣ್ಣಗಾಗಿಸುವ ಕಲೆಯನ್ನು ಕರಗತ ಮಾಡಿಕೊಳ್ಳಲಾಗಿದೆ. 'ದೇವರು' ಎಂದು ಹೇಳಿಬಿಟ್ಟರಂತು ಅಡ್ಡಾಗಿ ಹರಸುವ ಇವರ ಚಾಲಾಕಿತನಕ್ಕೇನೂ ಕಡಿಮೆಯಿಲ್ಲ ಎಂದು ಕವಿ ವ್ಯಂಗ್ಯವಾಡಿದ್ದಾರೆ. ನೊಂದವನ ಕಣ್ಣೀರು ಒರೆಸಿ ದೇವರಾಗುವ ಅವಕಾಶವೂ ರಾಜಕಾರಣಿಗಳಿಗೆ ಇಲ್ಲಿ ಲಭ್ಯವಿದೆ. ಆದರೆ ಕಣ್ಣೀರು ಒರೆಸುವ ಮನಸ್ಥಿತಿಗಿಂತ ಕಣ್ಣೀರು ತರಿಸುತ್ತಿರುವ ಪ್ರಮೇಯವೇ ಮುಂದಾದ ಬಗ್ಗೆ ಕವಿಗೆ ಇನ್ನಿಲ್ಲದ ಅಸಮಾಧಾನ.

***"ಜಾತಿ ಧರ್ಮಗಳ ದಾಳಗಳಲ್ಲಿ***

***ಸ್ವಾರ್ಥಕೆ ಎಂದೂ ಬಾಳುವುದಿಲ್ಲ***

***'ದೇಶವೆ ದೇಗುಲ' ಎಂದು ಕರೆದುಕೊಂಡವರು***

***ಕಾಯಕದಲ್ಲೆ ದೈವ ಕಂಡವರು***

***ಗಡಿಯ ತಾಣವೇ ತವರಾದವರು"***[19]

'ನಮ್ಮ ಸೈನಿಕರು' ಶೀರ್ಷಿಕೆಯ ಕವಿತೆಯ ಸಾಲುಗಳಿವು. ದೇಶ ಸೇವೆಗೆಂದೇ ತಮ್ಮ ಬದುಕನ್ನು ಸಮರ್ಪಿಸಿಕೊಳ್ಳುವ ಸೈನಿಕರನ್ನು ಮನದುಂಬಿ ಕವಿ ಸ್ಮರಿಸಿದ್ದಾರೆ. ಎಲ್ಲಾ ಮತ–ಧರ್ಮಗಳಿಂದಲೂ ತಾಯಿ ಭಾರತೀಯ ಸೇವೆಗೆ ತೆರಳುವ, ಗಡಿಗಳುದ್ದಕ್ಕೂ ಪ್ರಾಣದ ಹಂಗು ತೊರೆದು ಪಹರೆಗೆ ನಿಲ್ಲುವ ವೀರರು ಸದಾ ಗೌರವಕ್ಕೆ ಅರ್ಹರು. ದೇಶವನ್ನು ದೇವಾಲಯದಂತೆ ಭಾವಿಸಿಕೊಂಡು, ತಾಯ್ನೆಲದ ರಕ್ಷಣೆಗೆ ಟೊಂಕಕಟ್ಟಿ ನಿಲ್ಲುವ ಇವರ ಶೌರ್ಯ ಹೆಮ್ಮೆ ತರುತ್ತದೆ. 'ದೇಶ ಸೇವೆಯೇ ಈಶ ಸೇವೆ' ಎಂಬ ಮಾತು ನಿಜಾರ್ಥದಲ್ಲಿ ನಮ್ಮ ಸೈನಿಕರಿಗೆ ಅನ್ವಯಿಸುತ್ತದೆ. 'ಕಾಯಕದಲ್ಲಿ ನಿರತರಾದರೆ ಗುರು, ಲಿಂಗ, ಜಂಗಮವಾದಡೂ ಮರೆಯಬೇಕು' ಎಂಬ ವಚನಕಾರರು ಸೃಜಿಸಿದ ಮಾತು ನಮ್ಮ ಸೈನಿಕರಿಗೆ ಸರಿಯಾಗಿ ಹೊಂದುತ್ತದೆ. ಆ ಮೂಲಕ ತಾವು ಮಾಡುವ ಕೆಲಸದಲ್ಲಿಯೇ ದೈವವನ್ನು ಕಾಣುತ್ತಿರುವ ಅವರ ಮನೋಭೂಮಿಕೆ ಅತ್ಯಂತ ಶ್ರೇಷ್ಠವಾದದ್ದೆಂದು ಕವಿಯ ನಿಲುವು. ಇಲ್ಲಿ 'ದೇಶವೇ ದೇಗುಲವಾಗಿ,

---

[18]. ಬರಗೂರು ರಾಮಚಂದ್ರಪ್ಪ., ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು., ಪು.141.

[19]. ಬರಗೂರು ರಾಮಚಂದ್ರಪ್ಪ., ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು., ಪು.155.

ಕಾಯಕವೇ ದೈವ' ವಾಗಿರುವ ಸೋಜಿಗವನ್ನು ಮುಖ್ಯವಾಗಿ ಗಮನಿಸಬೇಕು. ಯಾವುದೇ ಸಾಂಸ್ಥಿಕ ನೆಲೆಯ ದೈವವೂ ದೇಶಸೇವೆಯ ಮುಂದೆ ಮಹತ್ವದ್ದಾಗಿ ಕಾಣುವುದಿಲ್ಲ. 'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪೀ ಗರೀಯಸಿ' ಎಂಬ ಭಾವದಿಂದಲೇ ತಮ್ಮ ಬದುಕನ್ನು ಕೃತಾರ್ಥಗೊಳಿಸಿಕೊಳ್ಳುವ ಅತ್ಯಂತ ಮಹತ್ವದ ಭಾವವಿದು' ಎನ್ನುವುದನ್ನು ಕವಿ ಹೃದಯ ಅತ್ಯಂತ ಪ್ರೀತಿ–ಹಾಗೆಯೇ ಗೌರವಗಳಿಂದ ಆದರಿಸಿದೆ. 'ದೇಶ ಸೇವೆಯೇ ದೇವರ ಸೇವೆ' ಎಂಬ ಮಂತ್ರವನ್ನು ಮುನ್ನೆಲೆಗೆ ತಂದಿದೆ.

ಹೀಗೆ ಬರಗೂರು ರಾಮಚಂದ್ರಪ್ಪ ಅವರ ಕಾವ್ಯ ದೇವರನ್ನು ಸೂಕ್ಷ್ಮ ಸಂವೇದನೆಗಳ ನೆಲೆಯಿಂದ ಗ್ರಹಿಸಿದೆ. ಅಸಮಾನತೆಯ ಸೃಷ್ಟಿಗೆ ಕಾರಣವಾಗಿರುವ ದೇವರು ಇರಲು ಸಾಧ್ಯವಿಲ್ಲ. ಅಶಾಂತಿಯನ್ನು ಪಸರಿಸುವ ಯಾವುದೇ ಧರ್ಮ ಧರ್ಮವಲ್ಲ ಎಂಬ ನಿಲುವಿನ ಕಡೆಗೆ ಅವರ ಕಾವ್ಯ ಹರಿದಿದೆ. 'ದೇವರ ಅಸ್ತಿತ್ವದ ಪ್ರಶ್ನೆಗೆ ಉತ್ತರ ಕೊಡುವುದು ಸುಲಭ ಸಾಧ್ಯವಲ್ಲ' ಎಂಬ ವಿಶಾಲ ಮನೋಭೂಮಿಕೆಯಲ್ಲಿ ಈ ಬಗೆಗಿನ ಮಿತಿಗಳನ್ನು ಅವರ ಕಾವ್ಯ ಕಾಪಿಟ್ಟುಕೊಂಡಿದೆ. 'ಬುದ್ಧದೇವನ ಮೌನದೊಳಗೆ ಅಸಂಖ್ಯ ಉತ್ತರಗಳಿವೆ' ಎಂದು ಕಂಡುಕೊಂಡ ಅವರು "ಆಸ್ತಿಕವಾದೀ ನಂಬಿಕೆಯ ನೆಪದಲ್ಲಿ ದೇವರು ಮತ್ತು ಧರ್ಮಗಳನ್ನು ಜನರ ಶೋಷಣೆಗೆ ಸಾಧನವಾಗಿಸಿಕೊಳ್ಳುವುದು ಮತ್ತು ವೋಟಿನ ಬ್ಯಾಂಕ್ ಆಗಿ ದುರುಪಯೋಗ ಮಾಡುವುದು ಅಕ್ಷಮ್ಯವಷ್ಟೇ ಅಲ್ಲ ಧರ್ಮ ಮತ್ತು ದೇವರ ಕುರಿತು ಜನರಲ್ಲಿರುವ ನಂಬಿಕೆಗೆ ಮಾಡುವ ಮೋಸ"[20] ಎಂಬುದಾಗಿ ಅಭಿಪ್ರಾಯಪಡುತ್ತಾರೆ. ಸಮಾಜ, ಸಂಸ್ಕೃತಿ, ದೇಶಗಳನ್ನು ನಿರ್ಮಿಸಿದ ಬೆವರೇ ನಿಜವಾದ ದೇವರು ಎಂಬುದು ಅವರ ಪ್ರಖರ ನಿಲುವು. ಬೆವರೇ ದೇವರೆನ್ನುವುದು ಅವರ ಆರಾಧನೆಯಲ್ಲ; ಸಂವೇದನೆ.

**ಪರಾಮರ್ಶನ/ಆಕರ ಗ್ರಂಥಗಳು**


- ಬರಗೂರು ರಾಮಚಂದ್ರಪ್ಪ. (2021). ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು, ಅಭಿರುಚಿ ಪ್ರಕಾಶನ, ಮೈಸೂರು.
- ಬರಗೂರು ರಾಮಚಂದ್ರಪ್ಪ. (2016). ಶಬ್ಧವಿಲ್ಲದ ಯುದ್ಧ, ಅಂಕಿತ ಪುಸ್ತಕ, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ ಬೆಂಗಳೂರು.
- ಬರಗೂರು ರಾಮಚಂದ್ರಪ್ಪ. (2001). ಸಂಸ್ಕೃತಿ : ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪುಸ್ತಕ, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ ಬೆಂಗಳೂರು.
- ಬರಗೂರು ರಾಮಚಂದ್ರಪ್ಪ. ದೇವರ ದೇವರು ಜನರ ಬೆವರು, ಪ್ರಜಾವಾಣಿ ಅಂಕಣ ಬರೆಹ ದಿನಾಂಕ: 12–08–2020.
- ಸತ್ಯಾನಂದ ಪಾತ್ರೋಟ. (2018). ಒಂದಿಷ್ಟು ಕ್ಷಣಗಳು, ಸಮತಾ ಪ್ರಕಾಶನ, ನವನಗರ, ಬಾಗಲಕೋಟೆ.


[20]. ಬರಗೂರು ರಾಮಚಂದ್ರಪ್ಪ., ಬೆವರು ನನ್ನ ದೇವರು, ಸಮಗ್ರ ಸಾಹಿತ್ಯ ಸಂಪುಟ–14, ಕವಿತೆಗಳು., ಲೇಖಕರ ಮಾತು ಭಾಗದಿಂದ